## ಸುಭಾಷಿತ ಮಂಜರಿ

ಲೋಭಾವಿಷ್ಟೋ ನರೋ ವಿತ್ತಂ
ವೀಕ್ಷತೇ ನೈವ ಚಾಪದಂ।
ದುಗ್ಧಂ ಪಶ್ಯತಿ ಮಾರ್ಜಾರೋ
ಯಥಾ ನ ಲಗುಡಾಹತಿಂ ॥

**ಹೇಗೆ ಬೆಕ್ಕು ಹಾಲನ್ನು ನೋಡುತ್ತದೆಯೇ ವಿನಾ ದೊಣ್ಣೆ ಪೆಟ್ಟನ್ನು ಯೋಚಿಸುವುದಿಲ್ಲವೋ ಹಾಗೆ ಆಸೆಗೆ ಬಲಿಯಾದವನು ಹಣವನ್ನು ನೋಡುತ್ತಾನೆಯೇ ವಿನಾ ಆಪತ್ತಿನ ಬಗೆಗೆ ಯೋಚಿಸುವುದೇ ಇಲ್ಲ**

ಆತ್ಮೀಯ ಓದುಗರೇ,

ನಮ್ಮ ವಿದ್ಯಾಸಂಸ್ಥೆಯ ಬಹು ವರ್ಷಗಳ ಕನಸೊಂದು ಅಟಲ್ ಟಿಂಕರಿಂಗ್ ಲ್ಯಾಬ್ ಉದ್ಘಾಟನೆಗೊಳ್ಳುವ ಮೂಲಕ ನನಸಾಗಿದೆ ಎನ್ನಬಹುದು. ಸಾಮಾಜಿಕ ಪರಿವರ್ತನೆಯ ಕೇಂದ್ರವಾಗಿ ನಮ್ಮ ಶಿಕ್ಷಣ ಸಂಸ್ಥೆ ಕಳೆದ ಮೂವತ್ತೆಂಟು ವರ್ಷಗಳಿಂದ ಕಾರ್ಯಸಾಧನೆ ಮಾಡುತ್ತಿದ್ದು ಇದೀಗ ವೈಜ್ಞಾನಿಕ ಕ್ಷೇತ್ರದಲ್ಲೂ ಸಾಧನೆ ಮಾಡಬಯಸುವ ಎಲ್ಲಾ ವಿದ್ಯಾರ್ಥಿಗಳಿಗೆ ತೆರೆದ ಮನೆಯಾಗಲಿದೆ. (ಈ ಪ್ರಯೋಗಾಲಯವು ಕೇವಲ ಕಲ್ಲಡ್ಕದ ವಿದ್ಯಾಸಂಸ್ಥೆಗೆ ಮಾತ್ರ ಸೀಮಿತವಾಗಿರದೆ ತಾಲೂಕಿನ ಎಲ್ಲಾ ಶಾಲೆಗಳಿಗೆ ಮುಕ್ತವಾಗಿ ಅವಕಾಶ ನೀಡುತ್ತದೆ)

ಜೂನ್ ತಿಂಗಳಲ್ಲಿ ವಾರ್ಷಿಕ ಯೋಜನೆಯಂತೆ ನಡೆಯುವ ಆಗತ ಸ್ವಾಗತ, ಪರಿಸರ ದಿನಾಚರಣೆ, ವಿಶ್ವಯೋಗ ದಿನ, ಶಿವಾಜಿ ಜನ್ಮ ದಿನಾಚರಣೆಯಂತಹ ಕಾರ್ಯಕ್ರಮಗಳ ವರದಿಯೊಂದಿಗೆ ಈ ತಿಂಗಳ ಸರಯೂ ನಿಮ್ಮ ಕೈಯಲ್ಲಿದೆ. ಎಂದಿನಂತೆ ಓದಿ ಅಭಿಪ್ರಾಯ ತಿಳಿಸಿ

ವಂದನೆಗಳೊಂದಿಗೆ


ಸಂಪಾದಕ ಬಳಗ


### ಸಂಪಾದಕೀಯ ಮಂಡಳಿ

**ಸಂಪಾದಕರು, ಮುದ್ರಕರು ಹಾಗೂ ಪ್ರಕಾಶಕರು :**
ನಾರಾಯಣ ಸೋಮಯಾಜಿ
ಅಧ್ಯಕ್ಷರು, ಶ್ರೀರಾಮ ವಿದ್ಯಾಕೇಂದ್ರ
**ಕಾರ್ಯನಿರ್ವಾಹಕ ಸಂಪಾದಕರು :**
ಕೃಷ್ಣಪ್ರಸಾದ ಕಾಯರ್‌ಕಟ್ಟೆ
**ಸಹಸಂಪಾದಕರು :**
ಪೂರ್ಣಿಮಾ (ಶಿಶುಮಂದಿರ)
ಲತಾ (ಪ್ರಾಥಮಿಕ ಶಾಲೆ)
ಸೇವಂತಿನಿ (ಪ್ರೌಢಶಾಲೆ)
ಹರ್ಷಿತಾ (ಪಿ.ಯು.ಸಿ)
ಶೈಲಜಾ (ಪದವಿ)
ವಿನುತ ಎಸ್.ಎನ್. (ಮಕ್ಕಳ ಪುಟ)
**ವ್ಯವಸ್ಥಾಪಕ ಸಂಪಾದಕರು :** ಕುಶಾಲಪ್ಪ ಅಮ್ಟೂರು


# ಶ್ರೀರಾಮ ವಿದ್ಯಾಕೇಂದ್ರ ಅಟಲ್ ಟಿಂಕರಿಂಗ್ ಲ್ಯಾಬ್ ಲೋಕಾರ್ಪಣೆ






**ಲ್ಯಾಬ್ ಉದ್ಘಾಟನೆಯ ಬಳಿಕ ಸಂದರ್ಶಕರ ಪುಸ್ತಕದಲ್ಲಿ ಶ್ರೀ ಎ.ಎಸ್.ಕಿರಣ್ ಕುಮಾರ್ ಬರೆದ ಅನಿಸಿಕೆ.**

**ಕಾರ್ಯಕ್ರಮದ ವಿವರ:**

"ಭಾರತ ದೇಶ ವಿಜ್ಞಾನ ಕ್ಷೇತ್ರಕ್ಕೆ ನೀಡಿದ ಕೊಡುಗೆಗೆ ಸಾವಿರಾರು ವರ್ಷಗಳ ಇತಿಹಾಸವಿದೆ. ಕೇಂದ್ರ ಸರಕಾರದ ನೀತಿ ಆಯೋಗದ ಅಟಲ್ ಇನೋವೇಷನ್ ಮಿಷನ್ ಅಡಿಯಲ್ಲಿ ಈ ಲ್ಯಾಬ್ ಸ್ಥಾಪನೆ ಆಗಿದೆ, ಶಾಲೆಯಲ್ಲಿರುವ ಮೂಲ ಸೌಕರ್ಯ, ವೈಜ್ಞಾನಿಕ ಚಟುವಟಿಕೆ, ಶಾಲೆಯ ಸಾಧನೆಗಳ ಹಿನ್ನೆಲೆಯಲ್ಲಿ ಕೇಂದ್ರ ಸರಕಾರದ ನೀತಿ ಆಯೋಗವು ಈ ಯೋಜನೆಗಾಗಿ ಶ್ರೀರಾಮ ವಿದ್ಯಾಕೇಂದ್ರ ಕಲ್ಲಡ್ಕವನ್ನು ಆಯ್ಕೆ ಮಾಡಿದೆ. ವಿದ್ಯಾರ್ಥಿಗಳಲ್ಲಿ ವಿಜ್ಞಾನ ಕ್ಷೇತ್ರದ ಕುರಿತ ಕುತೂಹಲ, ಆಸಕ್ತಿಯನ್ನು ಉತ್ತೇಜಿಸುವುದು ಈ ಪ್ರಯೋಗಾಲಯದ ಮುಖ್ಯ ಆಶಯವಾಗಿದೆ. ಆದ್ದ-ರಿಂದ ವಿದ್ಯಾರ್ಥಿಗಳು ಧ್ಯೇಯ ಮತ್ತು ಗುರಿ ಇಟ್ಟುಕೊಂಡು ಜ್ಞಾನ ಮತ್ತು ಕೌಶಲ್ಯದಿಂದ ಸರಿ-ತಪ್ಪುಗಳನ್ನು ಅರಿತುಕೊಂಡು ಪರಿಸರದ ಮೇಲೆ ಪ್ರಜ್ಞೆ ಇಟ್ಟು ಸಾಧನೆ ಮಾಡಿದರೆ ಅಸಾಧ್ಯವಾದುದು ಯಾವುದು ಇಲ್ಲ"

**- ಶ್ರೀ ಎ.ಎಸ್ ಕಿರಣ್‌ಕುಮಾರ್**
ಇಸ್ರೋ ಸಂಸ್ಥೆಯ ಪೂರ್ವಾಧ್ಯಕ್ಷರು

ವಿದ್ಯಾರ್ಥಿಗಳ ವಿಜ್ಞಾನ ಮಾದರಿ ಹಾಗೂ ವಿಷಯ ಮಂಡಿಸಿದ ಶೈಲಿ ಅತ್ಯುತ್ತಮವಾದುದು. ಈ ಕೌಶಲ್ಯವನ್ನು ಮುಂದಿನ ಜೀವನದಲ್ಲಿ ಮುಂದುವರಿಸಿ ದೇಶಕ್ಕೆ ವೈಜ್ಞಾನಿಕ ಕೊಡುಗೆ ನೀಡಿ.

**- ಶ್ರೀ ಶಿವಪ್ರಕಾಶ್** ಕ್ಷೇತ್ರ ಶಿಕ್ಷಣಾಧಿಕಾರಿ

ಪ್ರಶ್ನೆ ಮಾಡುವ ಪ್ರವೃತ್ತಿ ಬೆಳೆದರೆ ಹೊಸ ಆವಿಷ್ಕಾರಗಳು ನಡೆಯಲು ಸಾಧ್ಯ. ಪ್ರಕೃತಿ ಮತ್ತು ಮಾನವನ ನಡುವೆ ಉತ್ತಮ ಸಂಬಂಧ ಇರಬೇಕು. ಶ್ರೀರಾಮ ವಿದ್ಯಾಕೇಂದ್ರ ವಿಜ್ಞಾನಕ್ಕೆ ಮಾತ್ರವಲ್ಲದೆ ಸಾಮಾಜಿಕ ಹಾಗೂ ರಾಷ್ಟ್ರೀಯ ದೃಷ್ಟಿಕೋನ ಇಟ್ಟುಕೊಂಡು ಕಾರ್ಯನಿರ್ವಹಿಸುವುದು ಇಡೀ ದೇಶಕ್ಕೆ ಮಾದರಿ

**- ಶ್ರೀ ಟಿ.ಎಸ್. ವೆಂಕಟೇಶ್**
ದಕ್ಷಿಣ ಮಧ್ಯಕ್ಷೇತ್ರೀಯ ಸಂಪರ್ಕ ಪ್ರಮುಖ್, ರಾ.ಸ್ವ.ಸಂ

ವಿದ್ಯಾರ್ಥಿಗಳಿಗೆ ವಿಜ್ಞಾನ ಕ್ಷೇತ್ರದಲ್ಲಿ ಸಾಧನೆ ಮಾಡಲು ಅಟಲ್ ಟಿಂಕರಿಂಗ್ ಲ್ಯಾಬ್ ಸಹಕಾರ ನೀಡುತ್ತದೆ. ಆದ್ದರಿಂದ ಈ ಲ್ಯಾಬ್‌ನ್ನು ಎಲ್ಲಾ ವಿದ್ಯಾರ್ಥಿಗಳು ಸದುಪಯೋಗ ಪಡೆದು ಭಾರತವನ್ನು ವೈಜ್ಞಾನಿಕವಾಗಿ ಅಭಿವೃದ್ಧಿಗೊಳಿಸಬೇಕು

**- ಶ್ರೀ ರಾಜೇಶ್ ನ್ಯಾಕ್** ಶಾಸಕರು, ಬಂಟ್ವಾಳ

## ಪ್ರಾಥಮಿಕ ಶಾಲೆ

**ಹಿಂದೂ ಸಾಮ್ರಾಜ್ಯೋತ್ಸವ ಮತ್ತು ಹುಟ್ಟುಹಬ್ಬ ಆಚರಣೆ 23.06.2018**




ವೇದವ್ಯಾಸ ಧ್ಯಾನಮಂದಿರದಲ್ಲಿ ಹಿಂದೂ ಸಾಮ್ರಾಜ್ಯೋತ್ಸವ ಮತ್ತು ಮೇ ಮತ್ತು ಜೂನ್ ತಿಂಗಳಲ್ಲಿ ಹುಟ್ಟಿದ ಮಕ್ಕಳ ಹುಟ್ಟುಹಬ್ಬ ಕಾರ್ಯಕ್ರಮವನ್ನು ಆಚರಿಸಲಾಯಿತು. ಅತಿಥಿಗಳು ಶಿವಾಜಿ ಭಾವಚಿತ್ರಕ್ಕೆ ಪುಷ್ಪಾರ್ಚನೆಗೈದರು. ಭಗಿನಿ ಗಂಗಾ ಮಾತಾಜಿ ಶಿವಾಜಿಯ ಸಾಧನೆಗಳ ಬಗ್ಗೆ ಹಾಗೂ ಹುಟ್ಟುಹಬ್ಬದ ಮಹತ್ವದ ಬಗ್ಗೆ ಮಕ್ಕಳಿಗೆ ತಿಳಿಸಿಕೊಟ್ಟರು. ವೇದಿಕೆಯಲ್ಲಿ ಪೋಷಕ ಮಾತೆಯರು ಹಾಗೂ ಮುಖ್ಯೋಪಾಧ್ಯಾಯರು ಉಪಸ್ಥಿತರಿದ್ದರು. ಹೇಮಲತಾ ಮಾತಾಜಿ ನಿರೂಪಿಸಿ ಸ್ವಾತಿ ಮಾತಾಜಿ ಸ್ವಾಗತಿಸಿ, ನವ್ಯಶ್ರೀ ಮಾತಾಜಿ ವಂದಿಸಿದರು.

**ಪೂರ್ವಗುರುಕುಲದ ಪೋಷಕರ ಸಭೆ**

1ನೇ ತರಗತಿ ವಿದ್ಯಾರ್ಥಿಗಳ ಪೋಷಕರ ಸಭೆಯು ದಿನಾಂಕ 28.06.2018ರಂದು ವೇದವ್ಯಾಸ ಧ್ಯಾನಮಂದಿರದಲ್ಲಿ ನಡೆಯಿತು. ಪೂರ್ವಗುರುಕುಲದ ಕಲ್ಪನೆ, ಚಿಂತನೆ ಹಾಗೂ ಶೈಕ್ಷಣಿಕ ಕಾರ್ಯಚಟುವಟಿಗಳ ಕುರಿತು ಮಾರ್ಗದರ್ಶನ ಹಾಗೂ ಪೋಷಕರ ಅಭಿಪ್ರಾಯ ಕಲೆ ಹಾಕುವ ಹಿನ್ನೆಲೆಯಲ್ಲಿ ನಡೆದ ಸಭೆಯಲ್ಲಿ ವಿವೇಕಾನಂದ ವಿದ್ಯಾವರ್ಧಕ ಸಂಘ ಪುತ್ತೂರು ಇದರ ಅಧ್ಯಕ್ಷರಾದ ಡಾ.ಪ್ರಭಾಕರ್ ಭಟ್ ಕಲ್ಲಡ್ಕ ಇವರು ಪೂರ್ವಗುರುಕುಲದ ಚಿಂತನೆಯಲ್ಲಿ ನೀಡುತ್ತಿರುವ ಶಿಕ್ಷಣದ ಬಗ್ಗೆ ಮಾತನಾಡಿದರು. ಸಭೆಯಲ್ಲಿ ಉಪಸ್ಥಿತರಿದ್ದ ಪೋಷಕರು ಶಾಲೆಯ ಶಿಕ್ಷಣ ಪದ್ಧತಿಯನ್ನು ಮೆಚ್ಚಿ ತಮ್ಮ ಅಭಿಪ್ರಾಯಗಳನ್ನು ಹಂಚಿಕೊಂಡರು.

ವಿದ್ಯಾಕೇಂದ್ರದ ಅಧ್ಯಕ್ಷರಾದ ನಾರಾಯಣ ಸೋಮಯಾಜಿ, ಸಂಚಾಲಕರಾದ ವಸಂತ ಮಾಧವ, ಸಹಸಂಚಲಕರಾದ ರಮೇಶ್ ಶ್ರೀಮಾನ್, ಗಂಗಾಮಾತಾಜಿ ಪ್ರಾ.ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷರಾದ ಚಂದ್ರಶೇಖರ ಸಾಲ್ಯಾನ್, ಮುಖ್ಯೋಪಾಧ್ಯಾಯರು ಹಾಗೂ ಪೋಷಕರು ಉಪಸ್ಥಿತರಿದ್ದರು.

**ಶಾಲಾ ಚುನಾವಣೆ**



2018–19ನೇ ಶೈಕ್ಷಣಿಕ ಸಾಲಿನ ಸಂಸತ್ತು ರಚನೆಗಾಗಿ ಚುನಾವಣೆಯು 28.06.2018 ರಂದು ನಡೆಯಿತು. ಒಟ್ಟು 33 ಅಭ್ಯರ್ಥಿಗಳು ಚುನಾವಣಾ ಕಣಕ್ಕಿಳಿದಿದ್ದರು, ಹಾಗೆಯೇ 7 ಮತಗಟ್ಟೆಗಳಲ್ಲಿ ಚುನಾವಣೆ ನಡೆದು ಒಟ್ಟು 511 ವಿದ್ಯಾರ್ಥಿ ಮತದಾರರು ಮತ ಚಲಾಯಿಸಿದರು. ಮಾತಾಜಿ ಶ್ರೀಮಾನ್ ಮತಗಟ್ಟೆಯಲ್ಲಿ ಕಾರ್ಯನಿರ್ವಹಿಸಿದರು.

**ತಬಲ ತರಗತಿ ಆರಂಭ**

ಜೂನ್ 21.06.2018 ರಂದು ಶ್ರೀರಾಮ ಶಾಲೆಯ ಪ್ರೌಢ ವಿಭಾಗದ ಮಧುಕರದಲ್ಲಿ ಪ್ರಾಥಮಿಕದ ವಿದ್ಯಾರ್ಥಿಗಳಿಗೆ ತಬಲ ತರಗತಿಯು ದೇವದಾಸ ಪ್ರಭು ಇವರ ನೇತೃತ್ವದಲ್ಲಿ ನಡೆಯಿತು. ಪ್ರೌಢವಿಭಾಗದ ವಿಜ್ಞಾನ ಶಿಕ್ಷಕರಾದ ಶ್ರೀ ಗೋಪಾಲ್ ಮತ್ತು ಪೂರ್ವಗುರುಕುಲದ ಗೀತಾ ಮಾತಾಜಿ ಉಪಸ್ಥಿತರಿದ್ದರು.

**ವೇದ ತರಗತಿ ಆರಂಭ**

29.05.2018ರಿಂದ ಒಂದು ತಿಂಗಳ ಕಾಲ ಶ್ರೀರಾಮ ಪ್ರಾಥಮಿಕ ಶಾಲೆಯ 7ನೇ ತರಗತಿಯ ವಿದ್ಯಾರ್ಥಿಗಳಿಗೆ ವೇದ ತರಗತಿಯು ಪದವಿ ವಿಭಾಗದ ಸಾಧನ ಭವನದಲ್ಲಿ ಪ್ರಾರಂಭವಾಯಿತು. ಗುರುಗಳಾದ ಅರುಣ್ ಕಶೆಕೋಡಿ ಇವರು ದೀಪಪ್ರಜ್ವಲನೆ ಮಾಡುವುದರ ಮೂಲಕ ವೇದ ತರಗತಿಯನ್ನು ಆರಂಭಿಸಿದರು.

**"ವಿಶ್ವಯೋಗ ದಿನಾಚರಣೆ" 21.06.2018**

ನಿವೃತ್ತ ದೈಹಿಕ ಶಿಕ್ಷಕ, ಸಂಗೀತ ಪ್ರೇಮಿ, ಯೋಗಪಟು, ಕ್ರೀಡಾ ಕ್ಷೇತ್ರದಲ್ಲಿ ಅಂತರಾಷ್ಟ್ರೀಯ ಮಟ್ಟವನ್ನು ಪ್ರತಿನಿಧಿಸಿದ ಶ್ರೀ ಶಂಕರ್ ವಿ ಹಾಗೂ ವಿದ್ಯಾಸಂಸ್ಥೆಯ ಪೋಷಕರು ಆಗಿರುವ ಗಿರೀಶ್ ಭಟ್, ವಿದ್ಯಾಭಾರತಿಯ ಪ್ರಾಂತ ಶಾರೀರಿಕ ಪ್ರಮುಖ್, ರಾಷ್ಟ್ರೀಯ ಕ್ರೀಡಾಪಟು, ಜೊತೆಗೆ ಕೃಷಿಕರೂ ಆಗಿರುವ ಶ್ರೀ ಆನಂದ್ ಶೆಟ್ಟಿ ಮತ್ತು ನಮ್ಮ ಸಂಸ್ಥೆಯ ಯೋಗ ಗುರುಗಳಾದ ಶ್ರೀ ಕುಮಾರ್ ವಿಶ್ವಯೋಗ ದಿನಾಚರಣೆಯ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

**ಆಗತ ಸ್ವಾಗತ ಕಾರ್ಯಕ್ರಮ**

ದಿನಾಂಕ 16.6.2018ರ ಆಗತ ಸ್ವಾಗತ ಕಾರ್ಯಕ್ರಮದಲ್ಲಿ ಶ್ರೀ ಪ್ರೀತಮ್ ಜೆ ಗೌಡ (ಹಾಸನ ಕ್ಷೇತ್ರದ ಶಾಸಕರು) ಇಲ್ಲಿನ ಮಕ್ಕಳ ಶಿಸ್ತು, ದೇಶಭಕ್ತಿ, ಸಂಸ್ಕೃತಿಯನ್ನು ಶ್ಲಾಘಿಸಿದರು ಹಾಗೆಯೇ ಹಾಸನದಲ್ಲಿ ಇಂತಹ ಶಾಲೆಯ ನಿರ್ಮಾಣಕ್ಕೆ ನಾಂದಿಹಾಡಬೇಕೆಂದು ಆಶಯವನ್ನು ವ್ಯಕ್ತಪಡಿಸಿದರು. ಡಾ। ಪ್ರಭಾಕರ ಭಟ್ ಕಲ್ಲಡ್ಕ ಇವರು ಕಾರ್ಯಕ್ರಮದಲ್ಲಿ ಹಿಂದೂ ಎನ್ನುವಲ್ಲಿ ಅಡಗಿರುವ ಮಣ್ಣಿನ ಸತ್ವ ಎನೆಂಬುವುದನ್ನು ಪ್ರಾಸ್ತಾವಿಕ ಮಾತಿನ ಮೂಲಕ ತಿಳಿಸಿದರು. ವೇದಿಕೆಯಲ್ಲಿ ಪ್ರೊಫೆಸರ್ ವಾದಿರಾಜ್ (ಎಮ್.ಐ.ಟಿ ಮಣಿಪಾಲ), ಶ್ರೀ ಸುಧೀರ್ ಸಿದ್ದಾಪುರ (ರಾ.ಸ್ವ.ಸೇ. ಮಂಗಳೂರು ವಿಭಾಗದ ಪ್ರಮುಖರು), ಶ್ರೀ ಪೃಥ್ವಿರಾಜ್ ಹೆಬ್ಬಾರ್ (ಯುವ ಉದ್ಯಮಿ), ಶ್ರೀ ರಾಹುಲ್ ಕಿಣಿ (ಬಿ.ಜೆ.ಪಿ ಯುವ ಮೋರ್ಚ ರಾಜ್ಯ ಕಾರ್ಯಕಾರಿಣಿ ಸದಸ್ಯರು), ಶ್ರೀ ಹರ್ಷಿತ್ (ಪ್ರಧಾನ ಕಾರ್ಯದರ್ಶಿ ಹಾಸನ ಜಿಲ್ಲಾ ಬಿ.ಜೆ.ಪಿ ಯುವಮೋರ್ಚ), ಶ್ರೀ ಹರಿಪ್ರಸಾದ್, ಶ್ರೀ ವಸಂತ ಮಾಧವ, ಶ್ರೀ ನಾರಾಯಾಣ ಸೋಮಯಾಜಿ ಉಪಸ್ಥಿತರಿದ್ದು ಮಕ್ಕಳಿಗೆ ಶುಭ ಹಾರೈಸಿದರು.

**ನೂತನ ಅಧ್ಯಕ್ಷರ ಆಯ್ಕೆ**



ಪ್ರಾಥಮಿಕ ಶಾಲಾಭಿವೃದ್ಧಿ ಸಮಿತಿಯ ನೂತನ ಅಧ್ಯಕ್ಷರಾಗಿ ಶ್ರೀ ಚಂದ್ರಶೇಖರ ಸಾಲಿಯಾನ್ ಇವರು ಆಯ್ಕೆಯಾಗಿರುತ್ತಾರೆ. ನಮ್ಮದೇ ವಿದ್ಯಾಸಂಸ್ಥೆಯ ಹಿರಿಯ ವಿದ್ಯಾರ್ಥಿಯೂ ಆದ ಇವರು ಕಳೆದ ಐದು ವರ್ಷಗಳಿಂದ ಶಾಲಾಭಿವೃದ್ಧಿ ಸಮಿತಿಯಲ್ಲಿ ಸಕ್ರಿಯ ಸದಸ್ಯರಾಗಿದ್ದರು. ಸಾಲಿಯಾನ್ ಶಾಮಿಯಾನ ಸರ್ವಿಸಸ್‌ನ ಮಾಲಕರು.

## ಪ್ರೌಢ ಶಾಲೆ

**ಜಯಕರ್ನಾಟಕ ಚಿತ್ರಕಲಾ ಸ್ಪರ್ಧೆ 05.06.2018**



ವಿಜಯ ಕರ್ನಾಟಕ ಮತ್ತು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ವತಿಯಿಂದ ವಿದ್ಯಾರ್ಥಿಗಳಿಗೆ ವಿಶ್ವ ಪರಿಸರ ದಿನಾಚರಣೆ ಪ್ರಯುಕ್ತ ಚಿತ್ರಕಲಾ ಸ್ಪರ್ಧೆ ನಡೆಸಲಾಯಿತು. ಚಿತ್ರಕಲಾ ಶಿಕ್ಷಕರಾದ ಶ್ರೀ ಜಿನ್ನಪ್ಪ ಶ್ರೀಮಾನ್ ಇದನ್ನು ನಡೆಸಿಕೊಟ್ಟರು.

## ವಿಶ್ವ ಪರಿಸರ ದಿನಾಚರಣೆ 5.6.2018

ವಿಶ್ವ ಪರಿಸರ ದಿನಾಚರಣೆ ಕಾರ್ಯಕ್ರಮದಲ್ಲಿ ಅಧ್ಯಕ್ಷತೆ ವಹಿಸಿದ ವಿದ್ಯಾಕೇಂದ್ರದ ಸಂಚಾಲಕರು ಶ್ರೀ ವಸಂತ ಮಾಧವ ಶ್ರೀಮಾನ್ ಮಾತನಾಡಿ ಪರಿಸರದ ಸೊಬಗನ್ನು ಕೇವಲ ಆಸ್ವಾದಿಸಿ ಸಂತೋಷ ಪಡುವುದರ ಜೊತೆ ಪ್ರತಿಯೊಬ್ಬನೂ ಪರಿಸರ ಉಳಿಸಿ ಬೆಳೆಸುವ ಕಾರ್ಯವನ್ನು ಮಾಡಬೇಕು. ಸ್ವಚ್ಛ ಪರಿಸರವನ್ನು ಕಾಪಾಡಿ ಉತ್ತಮ ಆರೋಗ್ಯ ಪಡೆಯಬೇಕು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಶ್ರೀ ವಿಶ್ವನಾಥ ಪ್ರಭು, ಅಧ್ಯಕ್ಷರು ಪ್ರೌಢಶಾಲಾ ಶಾಲಾಭಿವೃದ್ಧಿ ಸಮಿತಿ, ಶ್ರೀಮತಿ ವಸಂತಿ ಕುಮಾರಿ, ಮುಖ್ಯ ಶಿಕ್ಷಕರು, ಉಪಸ್ಥಿತರಿದ್ದರು. ಕಾರ್ಯಕ್ರಮವನ್ನು ಗಿಡ ನೆಡುವ ಮೂಲಕ ಉದ್ಘಾಟಿಸಲಾಯಿತು.

ಕಾರ್ಯಕ್ರಮವನ್ನು ಶ್ರೀ ರಕ್ಷಾ, ಸ್ವಾಗತಿಸಿ, ಶಿಪಾಲಿ ವಂದಿಸಿ, ಸುಶ್ಮಿತಾ ನಿರೂಪಿಸಿದಳು.

## ಆಗತ–ಸ್ವಾಗತ : 14.06.2018

ನೂತನ ವಿದ್ಯಾರ್ಥಿಗಳನ್ನು ಸ್ವಾಗತಿಸುವ 'ಆಗತ–ಸ್ವಾಗತ' ಕಾರ್ಯಕ್ರಮ ನೆರವೇರಿತು. ವಿವೇಕಾನಂದ ವಿದ್ಯಾವರ್ಧಕ ಸಂಘದ ಅಧ್ಯಕ್ಷರಾದ ಡಾ| ಪ್ರಭಾಕರ ಭಟ್ ಮಾತನಾಡಿ 'ಪ್ರಕೃತಿ' ನಮ್ಮ ಗುರು ಎಂಬುದು ಭಾರತದ ವಿಶೇಷತೆ. ಇಂತಹ ಪ್ರಕೃತಿಯನ್ನು ದೇವರ ರೂಪದಲ್ಲಿ ಆರಾಧನೆ ಮಾಡುವ ರಾಷ್ಟ್ರ ನಮ್ಮದು. ಈ ರೀತಿಯ ಶ್ರೇಷ್ಠ ವಿಚಾರಧಾರೆಗಳನ್ನು ಜಗತ್ತಿಗೆ ಭಾರತ ನೀಡಿದಾಗ ವಿಶ್ವದ ಕಲ್ಯಾಣ ಸಾಧ್ಯ. ಇದಕ್ಕಾಗಿ ಭಾರತ ಬಲಿಷ್ಠವಾಗಬೇಕು. ಪ್ರತಿ ಪ್ರಜೆಯಲ್ಲೂ ರಾಷ್ಟ್ರಭಕ್ತಿಯನ್ನು ಉದ್ದೀಪನ ಮಾಡುವ ಕಾರ್ಯ ನಡೆಸಬೇಕು. ಇದು ಶಿಕ್ಷಣದಿಂದ ಸಾಧ್ಯ ಎಂದು ತಿಳಿಸಿದರು.

ವೇದಿಕೆಯಲ್ಲಿ ಅತಿಥಿಗಳಾಗಿ ಶ್ರೀ ಸುರೇಶ್ ರಾವ್, ಉದ್ಯಮಿ ಬೆಂಗಳೂರು, ಶ್ರೀ ಕರಣ್‌ರಾವ್, ಸಲಹೆಗಾರರು ಕನ್ಸಲ್ಟೆಂಟ್ ಆಫ್ ಟಿ.ವಿ.ಎಸ್ ಗ್ರೂಪ್, ಡಾ|ನೀರಜ್ ಶರ್ಮ, ಮಾಲಕರು L.G. Shop ಬೆಂಗಳೂರು ಉಪಸ್ಥಿತರಿದ್ದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ನಾರಾಯಣ ಸೋಮಯಾಜಿ ವಹಿಸಿದರು. ವೇದಿಕೆಯಲ್ಲಿ ಶ್ರೀ ವಸಂತಮಾಧವ, ಶ್ರೀ ರಮೇಶ್ ಎನ್, ಮುಖ್ಯೋಪಾಧ್ಯಾಯರು, ಡಾ| ಕಮಲಾ ಪ್ರಭಾಕರ ಭಟ್ ಕಲ್ಲಡ್ಕ ಉಪಸ್ಥಿತರಿದ್ದರು.

ಅನಘಾ 9ಪತಂಜಲಿ ವೈಯಕ್ತಿಕ ಗೀತೆ ಹಾಡಿದಳು. ಶಿಕ್ಷಕರಾದ ಶ್ರೀ ಪ್ರಶಾಂತ್ ನೇರೊಳು ನಿರೂಪಿಸಿ, ಶ್ರೀಮತಿ ಶಾಂಭವಿ, ಸ್ವಾಗತಿಸಿ, ಶ್ರೀಮತಿ ಸೌಮ್ಯ ಪಿ,' ವಂದಿಸಿದರು.

## ಗಣಿತ ಶಿಕ್ಷಕರ ಕಾರ್ಯಾಗಾರ

19.06.2018 ಹಾಗೂ 20.06.2018ರಂದು ಪಿಲಿಕುಳ ವಿಜ್ಞಾನ ಕೇಂದ್ರದಲ್ಲಿ ಕರ್ನಾಟಕ ಸ್ಟೇಟ್ ಕೌನ್ಸಿಲ್ ಫಾರ್ ಸೈನ್ಸ್ ಆಂಡ್ ಟೆಕ್ನಾಲಜಿ ಮತ್ತು ಪಿಲಿಕುಳ ನಿಸರ್ಗಧಾಮ ಇವರ ಸಹಯೋಗದೊಂದಿಗೆ ಜಿಲ್ಲಾ ಮಟ್ಟದ ಗಣಿತ ಶಿಕ್ಷಕರ ತರಬೇತಿ ಕಾರ್ಯಾಗಾರ ನಡೆಯಿತು. ಸಹಶಿಕ್ಷಕಿಯಾದ ಶ್ರೀಮತಿ ಶಾಂಭವಿ ಇವರು ತರಬೇತಿಯಲ್ಲಿ ಭಾಗವಹಿಸಿದ್ದರು.

## ವಿಶ್ವ ಯೋಗ ದಿನಾಚರಣೆ 21.06.2018




ವಿವೇಕಾನಂದ ಆಯುರ್ವೇದ ಪುತ್ತೂರು, ವಿವೇಕಾನಂದ ಯೋಗ & ಪ್ರಕೃತಿ ಚಿಕಿತ್ಸೆ ಆಸ್ಪತ್ರೆ ಪುತ್ತೂರು ಹಾಗೂ ಶ್ರೀರಾಮ ಪ್ರೌಢಶಾಲೆ ಕಲ್ಲಡ್ಕ ಇವರ ಸಂಯುಕ್ತ ಆಶ್ರಯದಲ್ಲಿ ವಿಶ್ವಯೋಗ ದಿನಾಚರಣೆ ನಡೆಯಿತು. ಮಾನವನ ಭೌತಿಕ ಮತ್ತು ಮಾನಸಿಕ ಶುದ್ಧೀಕರಣಕ್ಕೆ ಮೂಲ ಔಷಧ ಯೋಗ, ಬುದ್ಧಿ ಶುದ್ಧವಾಗಬೇಕಾದರೆ ಬುದ್ಧಿಗೆ ಬೌದ್ಧಿಕವಾದ ಚಿಂತನೆ ಕೊಡಬೇಕು. ದೇಹ ಆರೋಗ್ಯದಿಂದಿರಬೇಕಾದರೆ ದೇಹಕ್ಕೆ ವ್ಯಾಯಾಮ ಸಿಗಬೇಕು. ಇವೆರಡೂ ಯೋಗಾಭ್ಯಾಸದಿಂದ ಮಾತ್ರ ಸಾಧ್ಯ ಎಂದು ಶ್ರೀ ಶ್ಯಾಮ್ ಪ್ರಸಾದ್ ಕಬಕ M.Tec. ಪದವೀಧರರು, ಉದ್ಯಮಿಗಳು ಇವರು ವಿದ್ಯಾರ್ಥಿಗಳನ್ನುದ್ದೇಶಿಸಿ ಮಾತನಾಡಿದರು.

ಭಯ ಎನ್ನುವುದು ನಮ್ಮೊಳಗೆ ಅಡಗಿರುವ ಶಕ್ತಿಯನ್ನು ಹೊರಗೆ ತರಲು ಬಿಡುವುದಿಲ್ಲ. ಅಂತಹ ಭಯವನ್ನು ಕಿತ್ತೆಸೆದು ಭಗವಂತನ ಜೊತೆಗಿದ್ದುಕೊಂಡು ಧನಾತ್ಮಕ ಭಾವನೆ ಹೆಚ್ಚಾಗಿಸಲು ಯೋಗಾಭ್ಯಾಸದಿಂದ ಮಾತ್ರ ಸಾಧ್ಯ ಎಂದು ಶ್ರೀ ಯತೀಶ್ ಶೆಟ್ಟಿ ಇಂಜಿನಿಯರ್ ಹಾಗೂ ಆರ್ಟ್ ಆಫ್ ಲಿವಿಂಗ್‌ನ ಕಾರ್ಯಕರ್ತರು ಇವರು ಯೋಗದಿನವನ್ನುದ್ದೇಶಿಸಿ ಮಾತನಾಡಿದರು. ಶ್ರೀ ವಸಂತಮಾಧವ, ಶ್ರೀಮತಿ ವಸಂತಿ ಕುಮಾರಿ ಮುಖ್ಯ ಶಿಕ್ಷಕರು, ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ಕು.ರಕ್ಷಾ ಪಿ ನಿರೂಪಣೆ ಕು.ದಿವ್ಯದೀಪ ಸ್ವಾಗತಿಸಿ, ಕು.ಸ್ವಾತಿ ವಂದಿಸಿದರು. ಕು. ಅರ್ಚನಾ ಯೋಗ ಮಂತ್ರವನ್ನು ನಡೆಸಿಕೊಟ್ಟರು.

## ತಬಲ ತರಬೇತಿ : 21.06.2018

ಪ್ರಾಥಮಿಕ ಮತ್ತು ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ತಬಲ ಸಂಗೀತ ತರಬೇತಿಯ ಉದ್ಘಾಟನಾ ಕಾರ್ಯಕ್ರಮ ನಡೆಯಿತು. ಕಾರ್ಯಕ್ರಮದಲ್ಲಿ ತರಬೇತು ಶಿಕ್ಷಕರಾದ ಶ್ರೀ ದೇವದಾಸ ಪ್ರಭು, ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

## ಹಿಂದೂ ಸಾಮ್ರಾಜ್ಯೋತ್ಸವ



ದಿನಾಂಕ 23.06.2018ರಂದು ಶ್ರೀರಾಮ ಪ್ರೌಢಶಾಲೆ ಕಲ್ಲಡ್ಕದಲ್ಲಿ ಹಿಂದೂ ಸಾಮ್ರಾಜ್ಯೋತ್ಸವ ಕಾರ್ಯಕ್ರಮವನ್ನು ಆಚರಿಸಲಾಯಿತು. ಹಿಂದೂ ರಾಷ್ಟ್ರದ ಪ್ರಜೆ ಪರಿಶುದ್ಧ ಹಿಂದೂವಾಗಬೇಕಾದರೆ ಮೊದಲು ತಂದೆ–ತಾಯಿ, ಗುರುಹಿರಿಯರಿಗೆ ಪ್ರೀತಿ ಮತ್ತು ಗೌರವ ಕೊಡುವುದನ್ನು ಕಲಿಯಬೇಕು. ಇಂತಹ ಆದರ್ಶ ಜೀವನ ಹಿಂದೂ ಸಾಮ್ರಾಟ ಛತ್ರಪತಿ ಶಿವಾಜಿಯದ್ದಾಗಿತ್ತು. ಬಾಲ್ಯದಲ್ಲಿಯೇ ಅನ್ಯಾಯವನ್ನು ಎದುರಿಸುವ ಗುಣವನ್ನು ಹೊಂದಿರುವ ಶಿವಾಜಿ ಹಿಂದೂ ಸಾಮ್ರಾಜ್ಯಕ್ಕೆ ಸ್ಫೂರ್ತಿ. ಇಂತಹ ಶಿವಾಜಿಯ ಆದರ್ಶವನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಶ್ರೀ ತಿರುಮಲೇಶ್ವರ ಪ್ರಶಾಂತ್, ಇತಿಹಾಸ ಉಪನ್ಯಾಸಕರು ಶ್ರೀರಾಮ ಪದವಿ ಪೂರ್ವ ಕಾಲೇಜು ಕಲ್ಲಡ್ಕ ಇವರು ಕಾರ್ಯಕ್ರಮವನ್ನುದ್ದೇಶಿಸಿ ಮಾತನಾಡಿದರು. ಆಶಿಷ್ ವೈಯಕ್ತಿಕ ಗೀತೆ ಹಾಡಿದನು. ಕು. ಪೃಥ್ವಿ ಕಾರ್ಯಕ್ರಮ ನಿರೂಪಿಸಿ, ಕು. ಪ್ರಮೀಳಾ ಸ್ವಾಗತಿಸಿ, ಕು. ಧನ್ಯಾ ವಂದಿಸಿದರು.

## ಮತದಾನ 23.06.2018



ಪ್ರೌಢಶಾಲಾ ಮಕ್ಕಳ ವಿದ್ಯಾರ್ಥಿ ಸಂಸತ್ತು ಚುನಾವಣೆ ನಡೆಯಿತು. ವಿದ್ಯಾರ್ಥಿಗಳೇ ಚುನಾವಣಾಧಿಕಾರಿಗಳಾಗಿ ಕಾರ್ಯ ನಿರ್ವಹಿಸಿದರು. ಚುನಾವಣಾ ಪ್ರಕ್ರಿಯೆಯಲ್ಲಿ ಮುದ್ರಿತ ಮತಪತ್ರಗಳ ಬಳಕೆ ವಿಶೇಷವಾಗಿತ್ತು.

## ಪದವಿಪೂರ್ವ

**ಪ್ರಾರ್ಥನೆಯ ಮಹತ್ವ:**



ದಿನಾಂಕ 05/06/18ರಂದು ಪ್ರಾರ್ಥನೆಯ ಮಹತ್ವ ಎಂಬ ವಿಷಯದ ಬಗ್ಗೆ ಮಾಹಿತಿ ಕಾರ್ಯಕ್ರಮ ಏರ್ಪಡಿಸಲಾಗಿತ್ತು. ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಕಶೆಕೋಡಿ ಸೂರ್ಯನಾರಾಯಣ ಭಟ್ ಇವರು ಆಗಮಿಸಿ ಪ್ರಾರ್ಥನೆಯ ಬಗ್ಗೆ ಉಪಯುಕ್ತ ಮಾಹಿತಿಯನ್ನು ತಿಳಿಸಿಕೊಟ್ಟರು. ವೇದಿಕೆಯಲ್ಲಿ ಅರ್ಥಶಾಸ್ತ್ರ ಉಪನ್ಯಾಸಕರಾಗಿರುವ ವಿಲಾಸಿನಿ ಮಾತಾಜಿ ಉಪಸ್ಥಿತರಿದ್ದರು. ಸಂಸ್ಕೃತ ಉಪನ್ಯಾಸಕಿ ಶ್ರೀಮತಿ ನಂದಿನಿ ಕಾರ್ಯಕ್ರಮವನ್ನು ನಿರ್ವಹಿಸಿ, ಕುಮಾರಿ ನೇತ್ರಾ ವಂದಿಸಿದರು.

**ವಿಶ್ವ ರಕ್ತದಾನಿಗಳ ದಿನಾಚರಣೆ 14/06/2018**

ಭಾಸ್ಕರಾಚಾರ್ಯ ವಿಜ್ಞಾನ ಸಂಘದ ವತಿಯಿಂದ ಶ್ರೀರಾಮ ಪದವಿಪೂರ್ವ ವಿದ್ಯಾಲಯದಲ್ಲಿ ವಿಶ್ವ ರಕ್ತದಾನಿಗಳ ದಿನಾಚರಣೆಯ ಪ್ರಯುಕ್ತ 'ರಕ್ತದ ಗುಂಪು ವರ್ಗೀಕರಣ' ನಡೆಸಲಾಯಿತು. ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಪ್ರಾಥಮಿಕ ಶಾಲಾ ಸಹಶಿಕ್ಷಕರಾದ ಶ್ರೀ ಸಂತೋಷ್ ಇವರು ದೀಪ ಬೆಳಗಿಸಿ ರಕ್ತದಾನ ಮಹಾದಾನ, ಪ್ರತಿಯೊಬ್ಬನು ತನ್ನ ಸ್ವಯಂಪ್ರೇರಣೆಯಿಂದ ರಕ್ತದಾನವನ್ನು ಮಾಡುವಂತೆ ವಿದ್ಯಾರ್ಥಿಗಳನ್ನು ಪ್ರೇರೇಪಿಸಿದರು. ವೇದಿಕೆಯಲ್ಲಿ ಪ್ರಾಚಾರ್ಯರಾದ ಶ್ರೀ ವಸಂತ ಬಲ್ಲಾಳ್ ಉಪಸ್ಥಿತರಿದ್ದರು. ಈ ಕಾರ್ಯಕ್ರಮವನ್ನು ರಂಜನ್ ಕುಮಾರ್ ನಿರೂಪಿಸಿ, ಕು.ಯಕ್ಷಿತಾ ಸ್ವಾಗತಿಸಿ, ಕು. ಸುಚಿತ್ರಾ ವಂದಿಸಿದರು.

**ನಮ್ಮ ನಡವಳಿಕೆಗಳು 15.6.2018**



ಪದವಿ ಪೂರ್ವ ವಿಭಾಗದ ಬಾಲಕ ಹಾಗೂ ಬಾಲಕಿಯರಿಗೆ ಪ್ರತ್ಯೇಕವಾಗಿ ಎರಡು ಗುಂಪುಗಳಲ್ಲಿ ನಮ್ಮ ನಡವಳಿಕೆಗಳು, ಹವ್ಯಾಸಗಳು ಮ್ತು ಅಭಿರುಚಿ ಹೇಗಿರಬೇಕು ಎಂಬುದನ್ನು ವಿದ್ಯಾಕೇಂದ್ರದ ಸಂಚಾಲಕರು ಶ್ರೀ ವಸಂತ ಮಾಧವ ಹಾಗೂ ಆಡಳಿತ ಮಂಡಳಿ ಸದಸ್ಯರಾದ ಶ್ರೀಮತಿ ಸುಧಾ ಭಟ್ ಇವರು



ತಿಳಿಸಿಕೊಟ್ಟರು. ಉಪನ್ಯಾಸಕಿಯರಾದ ಶ್ರೀಮತಿ ವಿಲಾಸಿನಿ, ಶ್ರೀಮತಿ ಜಯಲಕ್ಷ್ಮೀ ಉಪಸ್ಥಿತರಿದ್ದರು.

**ವೇದ ತರಗತಿ ಆರಂಭ**

ದಿನಾಂಕ 15/6/2018ರಂದು 2018–19ನೇ ಸಾಲಿನ ವೇದ ತರಗತಿಗೆ ಶ್ರೀ ಸೂರ್ಯನಾರಾಯಣ್ ಭಟ್ ಚಾಲನೆ ಮಾಡಿದರು.

**ಪ್ರವೇಶೋತ್ಸವ ಕಾರ್ಯಕ್ರಮ** 19/6/2018

ಕಾರ್ಯಕ್ರಮದಲ್ಲಿ ಅರುಣ್ ಶಹಾಪೂರ್ ಮಾತನಾಡಿ ವಿದ್ಯಾರ್ಥಿಗಳ ಶಿಸ್ತು, ದೇಶಭಕ್ತಿ ಮಾದರಿ ಶಿಕ್ಷಣವನ್ನು ಕಾರ್ಯರೂಪಕ್ಕೆ ತಂದಿರುವ ಪ್ರಕ್ರಿಯೆಯನ್ನು ಶ್ಲಾಘಿಸಿದರು. ಹೈದರಾಬಾದ್ ಕರ್ನಾಟಕದಲ್ಲಿ ಇಂತಹ ವಿದ್ಯಾಸಂಸ್ಥೆಯ ನಿರ್ಮಾಣವಾಗಬೇಕೆಂಬ ಆಶಯವನ್ನು ವ್ಯಕ್ತಪಡಿಸಿದರು.

ಮಂಗಳೂರು ವಿಶ್ವವಿದ್ಯಾಲಯದ ಕುಲಪತಿವರು ಡಾ। ಮಹೇಶ್ವರಪ್ಪ ಉಜ್ವಲ ಭಾರತ ಕಟ್ಟಲು ಸಕ್ರಿಯ ಶಕ್ತಿಯಾಗಿ ಹೊರಹೊಮ್ಮಿ ಎಂದು ಆಶಿಸಿದರು. ಸಿ.ಪಿ.ಸಿ.ಆರ್.ಟಿ ಕಾಸರಗೋಡ್ ಇದರ ಕಾರ್ಯಕ್ರಮ ಸಂಯೋಜಕರು, ಹಿರಿಯ ವಿಜ್ಞಾನಿಗಳಾದ ಶ್ರೀ ಡಾ। ಮಹೇಶ್ವರಪ್ಪ ವಿದ್ಯಾರ್ಥಿಗಳು ದೇಶದ ಶಕ್ತಿ, ಛಲ, ನೇರನುಡಿಯಿಂದ ವಿದ್ಯಾರ್ಜನೆಯ ಸದುದ್ದೇಶ ಸಾಕಾರವಾಗುತ್ತದೆ ಎಂದರು. ಸಿವಿಲ್ ಇಂಜಿನಿಯರ್ ವಿಠಲ ಕನ್‌ಸ್ಟ್ರಕ್ಷನ್ ವಿಟ್ಲದ ಮುಖ್ಯಸ್ಥರಾಗಿರುವ ಶ್ರೀ ಸುರೇಶ್ ಬನಾರಿ ಯಾವುದೇ ಹಿಂಜರಿಕೆ ಇಲ್ಲದ ಪ್ರಯತ್ನವು ಯಶಸ್ಸಿನ ಮೆಟ್ಟಿಲಾಗುವುದು ಎಂದು ಹೇಳಿದರು. ಡಾ। ಪ್ರಭಾಕರ್ ಭಟ್, ವಿದ್ಯಾಕೇಂದ್ರದ ಸಂಚಾಲಕರು, ಅಧ್ಯಕ್ಷರು ಉಪಸ್ಥಿತರಿದ್ದರು.

**ಮಾಸಿಕ ಭಜನೆ 29/6/2018**

ಜೂನ್ ತಿಂಗಳ ಮಾಸಿಕ ಭಜನೆಯನ್ನು ದ್ವಿತೀಯ ಕಲಾವಿಭಾಗದ ವಿದ್ಯಾರ್ಥಿಗಳು ನಡೆಸಿಕೊಟ್ಟರು. ಜೂನ್ ತಿಂಗಳಲ್ಲಿ ಹುಟ್ಟುಹಬ್ಬವನ್ನು ಆಚರಿಸಿಕೊಂಡವರು ಶ್ರದ್ಧಾನಿಧಿಯನ್ನು ಅರ್ಪಿಸಿದರು. ಉಪನ್ಯಾಸಕರು ವಿದ್ಯಾರ್ಥಿಗಳಿಗೆ ತಿಲಕವಿಟ್ಟು ಆರತಿ ಎತ್ತಿ ಶುಭ ಹಾರೈಸಿದರು.

**ಚುನಾವಣೆ**



ದಿನಾಂಕ 18/6/2018 ರಂದು ನಾಮಪತ್ರ ಸಲ್ಲಿಸಲಾಯಿತು. ದಿನಾಂಕ 20/6/2018 ರಂದು ನಾಮಪತ್ರ ಪರಿಶೀಲನೆ ನಡೆಯಿತು. ದಿನಾಂಕ 21/6/2018 ರಂದು ಅಂತಿಮ ಅಭ್ಯರ್ಥಿಗಳ ಪಟ್ಟಿ ಪ್ರಕಟಣೆ ಮತ್ತು ಚಿಹ್ನೆ ನೀಡುವಿಕೆ ನಡೆಯಿತು. ದಿನಾಂಕ 22/6/2018 ರಂದು ಚುನಾವಣಾ ಪ್ರಚಾರ ನಡೆಯಿತು. ದಿನಾಂಕ 23/6/2018 ರಂದು ಚುನಾವಣೆ ಹಾಗೂ ಮತಗಣನೆ ನಡೆಯಿತು. ದಿನಾಂಕ 25/6/2018 ರಂದು ಫಲಿತಾಂಶ ಪ್ರಕಟಣೆಯಾಯಿತು.

## ಪದವಿ

**ಪದವಿ ವಿಭಾಗದ ಆಗತ–ಸ್ವಾಗತ ಕಾರ್ಯಕ್ರಮ**

ವಿವೇಕಾನಂದ ವಿದ್ಯಾವರ್ಧಕ ಸಂಘ ಪುತ್ತೂರು ಇದರ ಅಧ್ಯಕ್ಷರಾದ ಡಾ। ಪ್ರಭಾಕರ ಭಟ್ ಕಲ್ಲಡ್ಕ ಮಾತನಾಡಿ ಸರ್ವಸಾಮಾನ್ಯರನ್ನು ಗಮನದಲ್ಲಿಟ್ಟುಕೊಂಡು ಇಲ್ಲಿ ಶಿಕ್ಷಣ ಸಂಸ್ಥೆ ಆರಂಭಗೊಂಡಿದ್ದು, ಕಳೆದ 38 ವರ್ಷಗಳಲ್ಲಿ ಇದನ್ನು ಸಾಧಿಸುವಲ್ಲಿ ಯಶಸ್ವಿಯಾಗಿದ್ದೇವೆ. ಜೊತೆಗೆ ಸಂಸ್ಕಾರಯುತ ವಾತಾವರಣವನ್ನು ಬೆಳೆಸುತ್ತಾ 73 ರಿಂದ ಆರಂಭಗೊಂಡ ದಾಖಲಾತಿ ಸಂಖ್ಯೆ ಇಂದು 3500 ಆಗಿರುವುದೇ ನಮ್ಮ ಯಶಸ್ಸಿಗೆ ಸಾಕ್ಷಿ ಎಂದು ನುಡಿದರು.



ಅತಿಥಿಗೃಹ 'ಸಾಕೇತಸದನ'ವನ್ನು ಬೆಂಗಳೂರಿನ ಡಾ। ಬಿ. ಆರ್. ಅಂಬೇಡ್ಕರ್ ಮೆಡಿಕಲ್ ಕಾಲೇಜಿನ ಸಮುದಾಯ ಔಷಧ ವಿಭಾಗದ ಮುಖ್ಯಸ್ಥ ಡಾ। ಎಸ್.ಸಿ. ಸೂರ್ಯನಾರಾಯಣ ಉದ್ಘಾಟಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಸ್ಥೆಯ ಅಧ್ಯಕ್ಷ ನಾರಾಯಣ ಸೋಮಯಾಜಿ ವಹಿಸಿದ್ದರು. ವೇದಿಕೆಯಲ್ಲಿ ಶ್ರೀರಾಮ ವಿದ್ಯಾಕೇಂದ್ರದ ಸಂಚಾಲಕ ವಸಂತ ಮಾಧವ, ಡಾ। ಕಮಲ ಪ್ರಭಾಕರ ಭಟ್ ಉಪಸ್ಥಿತರಿದ್ದರು.